# ಎಲ್ಲ ಬಲ್ಲವಳು

■ ಜಿ.ವಿ. ಅರುಣ

‘ಅಮ್ಮ ನಿನಗೆ ಏನೂ ಗೊತ್ತಾಗಲ್ಲ?’ ಹನ್ನೆರಡು ವರ್ಷದ ಪ್ರಿಯಾ ಅವರ ಅಮ್ಮನ ಮೇಲೆ ಕೋಪದಿಂದ ಕಿರುಚಿದಳು. ಅಮ್ಮ ಮಗಳ ಮಾತುಕತೆಗಳನ್ನು ಕೇಳಿಸಿಕೊಳ್ಳುತ್ತ ಹಾಲಿನಲ್ಲಿ ಕುಳಿತಿದ್ದ ತಂದೆ ಕೊಠಡಿಯ ಬಾಗಿಲ ಬಳಿ ಬಂದು ‘ಏನಾಯಿತು?’ ಎಂದು ಕೇಳಿದರು. ಹೆಂಡತಿ ಸುಧಾಳ ಕಣ್ಣಿನ ಸಂಜ್ಞೆಯನ್ನು ಗಮನಿಸಿ. ‘ಕೋಪ ಮಾಡಿಕೋಬೇಡ ಮರಿ, ಸಮಾಧಾನವಾಗಿರು’ ಎಂದು ಹೇಳಿ ಹಿಂದಿರುಗಿದರು.

ತಲೆ ಸವರಲು ಬಂದ ಅಮ್ಮನ ಕೈಯನ್ನು ಪ್ರಿಯಾ ಮೊದಲು ನೂಕಿದಳು. ಅನಂತರ ಅವಳ ಎದೆಯಲ್ಲಿ ಹುದುಗಿ ಅಮ್ಮನ ಅಪ್ಪುಗೆಯಲ್ಲಿ ತನ್ನ ಹತಾಶೆಯನ್ನೆಲ್ಲ ಅಳುವಿನ ರೂಪದಲ್ಲಿ ಹೊರ ಹಾಕಿದಳು. ಮಗಳ ತಲೆ, ಬೆನ್ನು ಸವರುತ್ತ, ಮಾತನಾಡದೆ ‘ನಾನು ನಿನ್ನ ಜೊತೆ ಇದ್ದೀನಿ’ ಎಂಬ ಸಾಂತ್ವನವನ್ನು ಸುಧಾ ಮಗಳಿಗೆ ದಾಟಿಸಿದಳು.

ತನ್ನ ನಾಲ್ವರು ಸಹಪಾಠಿಗಳು ಕಳುಹಿಸಿದ್ದ ಅವರ ನೃತ್ಯದ ವಿಡಿಯೊ ತುಣುಕುಗಳನ್ನು ಮೊಬೈಲ್‌ನಲ್ಲಿ ಪ್ರಿಯಾ ತನ್ನ ಅಮ್ಮನಿಗೆ ತೋರಿಸಿದ್ದಳು. ಅಂದು ಭಾನುವಾರ ಸ್ನೇಹಿತೆಯರನ್ನು ಅನುಕರಣೆ ಮಾಡಿ ತನ್ನ ನೃತ್ಯದ ವಿಡಿಯೊ ಮಾಡಲು ಪ್ರಯತ್ನಿಸಿ ವಿಫಲಳಾಗಿದ್ದಳು. ಟೇಬಲ್ಲಿನ ಮೇಲೆ, ಕುರ್ಚಿಯ ಮೇಲೆ ಮೊಬೈಲ್ ಇಟ್ಟು ಅದರ ಎತ್ತರ ಸರಿಯಾಗದೆ ಚಿತ್ರೀಕರಣವಾಗಿರಲಿಲ್ಲ. ಆಗ ದಿಂಬು, ಪುಸ್ತಕಗಳಿಂದ ಎತ್ತರಿಸಿ ಪ್ರಯತ್ನಿಸಿದ್ದಳು. ಅದರಿಂದ ಮೊಬೈಲ್ ಜಾರಿ ಕೆಳಗೆ ಬಿದ್ದಾಗ ನಿರಾಶೆಯಿಂದ ಅಮ್ಮನ ಸಹಾಯ ಪಡೆಯಲು ಅಡುಗೆ ಮನೆಗೆ ಹೋದಳು.

ಭಾನುವಾರಕ್ಕೆ ವಿಶೇಷ ಅಡುಗೆ ಮಾಡಲು ತೊಡಗಿದ್ದ ಅಮ್ಮನಿಗೆ ಪುರಸೊತ್ತು ಹೇಗಿರುತ್ತದೆ? ಅಡುಗೆ ಮನೆಗೆ ಬಂದು ಮಗಳು ವಿಡಿಯೊ ಮಾಡಲು ಸಹಾಯ ಕೇಳಿದಾಗ, ಮಗಳು ಅದಕ್ಕೆ ನೀಡುತ್ತಿದ್ದ ಪ್ರಾಮುಖ್ಯತೆ ಗೊತ್ತಾಗದೆ, ಅವಳಿಗೆ ಏನು ಬೇಕಾಗಿದೆ ಎಂದು ತಿಳಿದುಕೊಳ್ಳದೆ, ‘ಈಗ ಬಿಡುವಿಲ್ಲ. ಆಮೇಲೆ ನೋಡೋಣ’ ಎಂದು ಸಾಗಹಾಕಿದ್ದಳು. ಅಷ್ಟರಲ್ಲೇ ಹಾಲಿನಲ್ಲಿ ತರಕಾರಿ ಕತ್ತರಿಸುತ್ತಿದ್ದ ಅವಳ ಗಂಡ ‘ತರಕಾರಿ ಕತ್ತರಿಸಿದ್ದು ಆಯ್ತು. ನಂಗೆ ಒಂದು ಬೈಟು ಕಾಫಿ ಕೊಡ್ತಿಯಾ’ ಎಂದು ಕೇಳಿದ್ದರು.

ಅವರ ಬೈಟು ಕಾಫಿಯ ಹಿನ್ನೆಲೆ ಚೆನ್ನಾಗಿತ್ತು. ಗಂಡ ಹೆಂಡತಿ ಇಬ್ಬರಿಗೂ ದಿನದಲ್ಲಿ ನಾಲ್ಕೈದು ಬಾರಿ ಕಾಫಿ ಕುಡಿಯುವ ಅಭ್ಯಾಸವಿತ್ತು. ಯಾರಿಗೆ ಕಾಫಿ ಬೇಕು ಅನ್ನಿಸಿದರೂ, ಅವರು ಒಂದು ಲೋಟವೋ ಮುಕ್ಕಾಲು ಲೋಟವೋ ಕಾಫಿಯನ್ನು ಬೆರೆಸಿಕೊಂಡು, ಅದನ್ನು ಎರಡು ಭಾಗ ಮಾಡಿ ಇಬ್ಬರೂ ಹಂಚಿಕೊಂಡು ಕುಡಿಯುವುದು ಅವರ ಅಪ್ರಕಟಿತ ಪ್ರೀತಿಯ ಭಾಗವಾಗಿ ಹೋಗಿತ್ತು. ‘ಬೈಟು ಕಾಫಿ ಬೇಕು’ ಎಂದು ಯಾರಾದರೂ ಕೇಳಿದರೆ, ಅದು ‘ಅರ್ಧ ಲೋಟ ನೀನೂ ಕುಡಿ’ ಎಂಬ ಪ್ರೀತಿಯ, ಕಾಳಜಿಯ ಸಂಕೇತವಾಗಿರುತ್ತಿತ್ತು. ಸುಧಾಳ ನಾದಿನಿ ಅಮೆರಿಕದಿಂದ ಬಂದಾಗ ಒಂದು ದೊಡ್ಡ ಮಗ್ಗಿನ ಭರ್ತಿ ಕಾಫಿ ಮಾಡಿಸಿಕೊಂಡು ಅದನ್ನು ನಿಧಾನವಾಗಿ ಹೀರುತ್ತಾ ಅಲ್ಲಿ ಇಟ್ಟು, ಇಲ್ಲಿ ಇಟ್ಟು, ಪೂರ್ತಿ ಕುಡಿಯುವ ಹೊತ್ತಿಗೆ ಎರಡು ಮೂರು ಗಂಟೆಗಳಾದರೂ ಆಗಿರುತ್ತಿತ್ತು.

‘ಅಲ್ಲ ಕಣೆ, ಬಿಸಿ ಬಿಸಿಯಾಗಿ ಚಿಕ್ಕ ಲೋಟ ಕಾಫಿ ಒಂದೇ ಸರಿ ಕುಡಿದು ಮುಗಿಸುವುದಲ್ಲವಾ? ಹೀಗೆ ತಣ್ಣಗೆ ಮಾಡಿಕೊಂಡು ಗಂಟೆಗಟ್ಟಲೆ ಕುಡಿದ್ರೆ ಏನು ಮಜಾ ಇರುತ್ತೆ. ನನಗೇನೋ ಕಾಫಿ ತಣ್ಣಗೆ ಕುಡಿದರೆ, ಕುಡಿದ ಹಾಗೇ ಅನ್ನಿಸುವುದಿಲ್ಲ’ ಎಂದ ಸುಧಾ, ‘ಯಾವಾಗ ಬೇಕಾದರೂ ಕೇಳು. ನಾನೇ ಬಿಸಿಯಾಗಿ ಮಾಡಿಕೊಡುತ್ತೇನೆ’ ಎಂದು ಮಾತನ್ನು ಸೇರಿಸಿದ್ದಳು.

‘ಅತ್ತಿಗೆ, ನನಗೆ ಕಾಫಿ ಹೀಗೆ ಕುಡಿದು ಅಭ್ಯಾಸವಾಗಿ ಹೋಗಿದೆ. ನಮ್ಮ ಊರಲ್ಲಿ ಕೆಲವು ಸಲಿ ಕೊನೆಯ ಗುಟುಕನ್ನು ಕುಡಿಯುವಾಗ ಮಧ್ಯಾಹ್ನ ಆಗಿಹೋಗಿರುತ್ತೆ. ಆಫೀಸಿನಲ್ಲೂ ನಾನೇಕೆ, ನನ್ನ ಸ್ನೇಹಿತರೆಲ್ಲ ಹೀಗೆ ಮಾಡ್ತೀವಿ’ ಎಂದಿದ್ದಳು.

ಇವರಿಬ್ಬರು ಬೈಟು ಕಾಫಿ ಕುಡಿಯುವಾಗ ಅವರ ಕಣ್ಣಲ್ಲಿ ಮಿಂಚುತ್ತಿದ್ದ ಪ್ರೀತಿಯನ್ನು ಅವಳ ನಾದಿನಿಯೊಬ್ಬಳೇ ಗುರುತಿಸಿದ್ದು.

‘ಏನತ್ತಿಗೆ, ಬೈಟು ಕಾಫಿ ಕುಡಿಯೋ ರೊಮ್ಯಾನ್ಸ್ ಜೋರಾಗಿದೆ’ ಎಂದಾಗ, ಸುಧಾಳ ಮುಖ ಕೆಂಪಾಗಿ ‘ಏ ಹೋಗೇ, ಹಾಗೇನೂ ಇಲ್ಲ’ ಎಂದಿದ್ದಳು. ನಾದಿನಿಗೆ ತಮ್ಮ ಗುಟ್ಟು ತಿಳಿದಿದ್ದರಿಂದ ಸುಧಾ ಪುಳಕಿತಳೂ ಆಗಿದ್ದಳು.

ಇಷ್ಟೆಲ್ಲ ಹಿನ್ನೆಲೆಯ ಬೈಟು ಕಾಫಿಗೆ ಬೇಡಿಕೆ ಬಂದಾಗ ಉಳಿದೆಲ್ಲ ಕೆಲಸಗಳನ್ನು ಬದಿಗೊತ್ತಿ, ಕಾಫಿ ಮಾಡಿ ಗಂಡನಿಗೆ ಕೊಟ್ಟು, ತನ್ನ ಲೋಟದೊಂದಿಗೆ ಮಗಳಿಗೂ ಒಂದು ಲೋಟ ಹಿಡಿದು ಅವಳ ಕೋಣೆಗೆ ಬಂದಳು. ನೃತ್ಯದ ವಿಡಿಯೊ ಮಾಡಲಾಗದೆ ಪ್ರಿಯಾಳ ನಿರಾಶೆ ನಿಧಾನವಾಗಿ ಕೋಪಕ್ಕೆ ತಿರುಗುತ್ತಿತ್ತು. ಅಮ್ಮ ಮುಗುಳು ನಗುತ್ತ ತಂದುಕೊಟ್ಟ ಬಿಸಿ ಕಾಫಿಯ ಲೋಟದ ಶಾಖದಿಂದ ಅವಳ ಕೋಪ ಭುಗಿಲೆದ್ದಿತ್ತು.

‘ಇದಕ್ಕೆ ಸಮಯ ಇದೆಯಾ ನಿನಗೆ?’ ಮಗಳು ಕೇಳಿದಳು.

‘ಬಿಸಿ ಕಾಫಿ, ಅಪ್ಪ ಕೇಳಿದ್ದು ಕಣೆ. ಅವರ ಜೊತೆಗೆ ನಿನಗೂ ತಂದಿದೀನಲ್ಲ, ಕುಡಿ’ ಏನಾಗುತ್ತಿದೆ ಎಂಬ

